
ಕಥೆ



# ಒಂಟಿ ಮಾವಿನ ಮರ

**ಡಾ.ನಾಗರಾಜು ಜಿ.ಬಿ. ಭೈರೇನಹಳ್ಳಿ**

ಕಲೆ: ಮುರಳೀಧರ್ ರಾಥೋಡ್

‘ಲೇಟಾಯ್ತು, ಬೇಗ ಬೇಗ ಏಳಿ. ಪೂಜೆ ಮಾಡಿ ಹಾರ ಹಾಕುವವರು ಬೇಗ ಮುಗಿಸಿ, ಸಂಜೆಯಾಗ್ತಾ ಇದೆ. ಇವತ್ತು ಮೋಡ ಬೇರೆ ಆಗಿ ಮಳೆ ಬರೋಹಂಗೈತೆ. ಮಳೆ ಏನಾದ್ರು ಬಂದ್ರೆ ಮಣ್ಣು ಮಾಡೋದಕ್ಕೂ ಜನ ಇರಲ್ಲ. ಗುಂಡೀಲಿ ನೀರು ತುಂಬಿಕೊಂಡ್ರೆ ಹೆಣ ಗುಂಡಿಗೆ ಹಾಕಲಿಕ್ಕೂ ತೊಂದರೆ ಆಗುತ್ತೆ’ ಎನ್ನುತ್ತಾ ಪಂಚಾಕ್ಷರಿ ಐನೋರು ಗದರುವ ದನಿಯಲ್ಲಿ ಎಲ್ಲರನ್ನೂ ಎಚ್ಚರಿಸುತ್ತಿದ್ದರು. ಅವರು ಹೇಳುವುದೂ ಕೂಡ ಸರಿಯಿತ್ತು. ಮುಂಗಾರು ಮೋಡಗಳು ಮೇಲೆ ದಟ್ಟವಾಗಿ ಕವಿದುಕೊಂಡು ಮಧ್ಯಾಹ್ನವೇ ಕತ್ತಲು ಕವಿದಂತೆ ಭಾಸವಾಗುತ್ತಿತ್ತು. ಮಳೆ ಶುರುವಾದರೆ ಮಣ್ಣು ಮಾಡುವುದು ಕಷ್ಟವಾಗುತ್ತದೆ ಎಂದು ಅಲ್ಲಿದ್ದವರಿಗೆಲ್ಲಾ ತಿಳಿದಿತ್ತು. ಆದರೆ ಪಾರ್ವತಜ್ಜಿಯ ಸೊಸೆಯ ಕಡೆಯವರು ದೂರದಿಂದ ಬರಬೇಕಿದ್ದು, ಅವರು ಬರುವ ಮುಂಚೆಯೇ ಹೆಣವನ್ನು ಎತ್ತಿದರೆ ‘ಬೇಕು ಅಂತಲೇ ನಮಗೆ ಮುಖ ತಪ್ಪಿಸಬೇಕು ಅಂತ ಪ್ಲಾನ್ ಮಾಡಿ ಹೀಗೆ ಹೆಣ ಎತ್ತಿದ್ದೀರಾ?’ ಎಂದು ಅವರು ಗಲಾಟೆ